ಇಟ್ಟಿಲ್ಲ. ಇದು ಆ ಪಾತ್ರೆ ಅಲ್ಲ. ಇದು ಮಸಾಲೆನೇ ಅಲ್ಲ. ಕ್ವತ್ತಂಬರಿ ಸೊಪ್ಪು ಆ ಅಂಗಡ್ಯಾಗೆ ತರಬಾರದಿತ್ತು. ಅದಕ್ಕೆ ಚನಾಗಿಲ್ಲ, ಈರುಳ್ಳಿ ಚೌಕ ಅಲ್ಲ ಉದ್ದುದ್ದ ಕತ್ರಸಕಾಗಿತ್ತು... ನಾವು ಇದ್ನ ಹಾಕಲ್ಲ... ನೀನೇ ಏನೇನಾರಾ ಮಾಡ್ತಿ... ಇದೆಲ್ಲಾ ನಮಿಗೆ ಸರಿ ಆಗಲ್ಲ" ಅಂತ ಹೇಳುವುದು.

ನಮಗೂ ಸ್ವಲ್ಪ ವಯಸ್ಸು ಕಳೆಯುತ್ತಾ ಜೋರು ಪ್ರತಿರೋಧ ತೋರಿಸಲು ಶುರುಮಾಡಿದರೆ ತನಗೆ ಹಸಿವೆ ಇಲ್ಲ ಅಥವಾ 'ಬ್ಯಳಗಿಂದ ಯಾಕೋ ಹ್ವಟ್ಟಿ ಗುರ್ ಗುರ್ ಅಂತತಿ... ಏನೂ ಬ್ಯಾಡವಾ ನನಿಗೆ' ಅಂತ ನಾಟಕವಾಡುತ್ತಾ ಮುದ್ದೆ ಚಟ್ನಿ ಅಥವಾ ತಂಗಳನ್ನ ಖಾರದ ಚಟ್ನಿ ಕಲಸಿ ಯಾರಿಗೂ ಗೊತ್ತಾಗದ ಹಾಗೆ ತಿಂದು ಟೀವಿ ನೋಡಲು ಕೂತುಬಿಡುವುದು ಅಥವಾ ಮಲಗಿಬಿಡುವುದು.

